**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ ಎಂ ಎಫ್ ಸಿ ನ್ಯಾಯಾಲಯ , ಹಿರಿಯೂರು**

**ಸಿ ಸಿ ನಂ. 1096 / 2020**

| **ಪಿರ್ಯಾದಿ** | **ವಿರುದ್ಧ** | **ಆರೋಪಿತರು** |
|---|---|---|
| ಐಮಂಗಲ ಪೊಲೀಸ್ ಠಾಣೆ,<br>ಹಿರಿಯೂರು | | ಸಂತೋಷ ತಾಂಡಲೆ ಬಿನ್ ಕಿಶನ್<br>ವಯಸ್ಸು 26 ವರ್ಷ,<br>ಎಂ.ಹೆಚ್.-14, ಜಿಯು-8052<br>ನೇ ಲಾರಿ ಚಾಲಕ,<br>ಚದ್ರಿ ಚೌಡಿ ಗ್ರಾಮ,<br>ಚಕ್ರವಾಡಿ ಪೋಸ್ಟ್,<br>ಬೀದ್, ಮಹಾರಾಷ್ಟ್ರ. |

ದಂ. ಪ್ರ. ಸಂಹಿತೆ ಕಲಂ 313 ರಡಿಯಲ್ಲಿ ಮಾಡಿ

ಕೊಳ್ಳಲಾದ ಆರೋಪಿತರ ಹೇಳಿಕೆ

ಪ್ರಶ್ನೆಃ -ನ್ಯಾಯಾಲಯದಲ್ಲಿ ಈ ಪ್ರಕರಣದಲ್ಲಿ ಸಾಕ್ಷಿದಾರರು ಸಾಕ್ಷ್ಯ ನುಡಿದಿರುವುದನ್ನು ಕೇಳಿದ್ದೀರಾ?

ಆರೋಪಿ ಉತ್ತರಃ-

ಪ್ರಶ್ನೆಃ- ಫ್ರಾಸಾ-1 ಉಮೇಶ್ ಪಿ ಆರ್.ಟಿ.ಓ., ಕೆ ಆರ್ ಪುರಂ, ಇವರು ತನ್ನ ಸಾಕ್ಷ್ಯದಲ್ಲಿದಿಃ24.05.2019 ರಂದು ತಾನು ಮೃತ ಸುರೇಶ್ ಹಾಗೂ ಚಾಸಾ-2 ಮತ್ತು 3 ರವರೊಂದಿಗೆ ಗುಯಿಲಾಳು ಟೋಲ್ ಬಳಿ, ವಾಹನ ತಪಾಸಣೆ ಮಾಡುತ್ತಿದ್ದಾಗ, ದಿಃ25.05.2019 ರಂದು ಬೆಳಗಿನ ಜಾವ 12.15 ರ ಸಮಯದಲ್ಲಿ ತಾವುಗಳು ತಮ್ಮ ಜೀಪ್ ಸಂ.KA 16-G-3636 ಬಳಿ ಇದ್ದಾಗ ಒಂದು ಲಾರಿ ಚಿತ್ರದುರ್ಗದ ಕಡೆಯಿಂದ

ಹಿರಿಯೂರು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಜೀಪ್ ಬಳಿ ನಿಂತಿದ್ದ ಸುರೇಶ್ ಅವರಿಗೆ ಡಿಕ್ಕಿ ಪಡಿಸಿ ಲಾರಿಯನ್ನು ನಿಲ್ಲಿಸಿದ ಹೋಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ– ಫ್ರಾಸಾ–1 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಸದರಿ ಲಾರಿಯ ಸಂಖ್ಯೆ: MH 14 GU 8052 ಆಗಿರುತ್ತದೆ, ಅಪಘಾತದಿಂದಾಗಿ ತಮ್ಮ ಡ್ರೈವರ್ ಸುರೇಶ್ ಅವರ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು, ಕಿವಿ ಮತ್ತು ಮೂಗಿನಲ್ಲಿ ರಕ್ತ ಬರುತ್ತಿತ್ತು, ಅವರನ್ನು ತಮ್ಮ ಇಲಾಖಾ ವಾಹನದಲ್ಲಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತೇವೆ, ಎಸ್ ಎಸ್ ಆಸ್ಪತ್ರೆಯ ವೈದ್ಯರು ಬೆಳಗಿನ ಜಾವ 3.00 ಸಮಯದಲ್ಲಿ ಸುರೇಶ್ ಮೃತಪಟ್ಟರು ಎಂದು ತಿಳಿಸಿರುತ್ತಾರೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ– ಫ್ರಾಸಾ–1 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ದಿಃ28.05.2019 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ, ಈ ಅಪಘಾತಕ್ಕೆ ಆರೋಪಿಯ ಅತೀ ವೇಗ ಮತ್ತು ನಿರ್ಲಕ್ಷತೆಯ ಚಾಲನೆ ಕಾರಣವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ- ಫ್ರಾಸಾ-2 ಮಂಜುನಾಥ್ ಇವರು ತನ್ನ ಸಾಕ್ಷ್ಯದಲ್ಲಿ ದಿಃ24.05.2019 ರಂದು ತಾನು ಮೃತ ಸುರೇಶ್ ಹಾಗೂ ಚಾಸಾ-1 ಮತ್ತು 3 ರವರೊಂದಿಗೆ ಗುಯಿಲಾಳು ಟೋಲ್ ಬಳಿ, ವಾಹನ ತಪಾಸಣೆ ಮಾಡುತ್ತಿದ್ದಾಗ, ದಿಃ25.05.2019 ರಂದು ಬೆಳಗಿನ ಜಾವ 12.15 ರ ಸಮಯದಲ್ಲಿ ತಾವುಗಳು ನಮ್ಮ ಜೀಪ್ ಸಂ.KA 16-G-3636 ಬಳಿ ಇದ್ದಾಗ ಒಂದು ಲಾರಿ ಚಿತ್ರದುರ್ಗದ ಕಡೆಯಿಂದ ಹಿರಿಯೂರು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಜೀಪ್ ಬಳಿ ನಿಂತಿದ್ದ ಸುರೇಶ್ ಅವರಿಗೆ ಡಿಕ್ಕಿ ಪಡಿಸಿ ಲಾರಿಯನ್ನು ನಿಲ್ಲಿಸಿದೆ ಹೋಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ-

ಪ್ರಶ್ನೆಃ- ಫ್ರಾಸಾ-2 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಸದರಿ ಲಾರಿಯ ಸಂಖ್ಯೆ: MH 14 GU 8052 ಆಗಿರುತ್ತದೆ, ಅಪಘಾತದಿಂದಾಗಿ ನಮ್ಮ ಡ್ರೈವರ್ ಸುರೇಶ್ ಅವರ ತಲೆಗೆ ಮತ್ತು ಭುಜಕ್ಕೆ ತೀವ್ರವಾಗಿ ಪೆಟ್ಟು ಬಿದ್ದು ಗಾಯಗಳಾಗಿರುತ್ತವೆ, ಅವರನ್ನು ತಮ್ಮ ಇಲಾಖಾ ವಾಹನದಲ್ಲಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ, ಎಸ್ ಎಸ್ ಆಸ್ಪತ್ರೆಯ ವೈದ್ಯರು ಬೆಳಗಿನ ಜಾವ 3.00 ಸಮ ಯದಲ್ಲಿ ಸುರೇಶ್ ಮೃತಪಟ್ಟರು ಎಂದು ತಿಳಿಸಿರುತ್ತಾರೆ, ಅದೇ ದಿನ ಬೆ.6.00 ಗಂಟೆಗೆ ಐಮಂಗಲ ಪೊಲೀಸ್ ಠಾಣೆಯಲ್ಲಿ ಚಾಸಾ-1 ರವರು ದೂರು ದಾಖಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ-

ಪ್ರಶ್ನೆಃ- ಫ್ರಾಸಾ-2 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಐಮಂಗಲ ಪೋಲಿಸರು ಅಪಘಾತವಾದ ಸ್ಥಳಕ್ಕೆ ತನ್ನನ್ನು ಮತ್ತು ಚಾಸಾ-3 ರವರನ್ನು

ಬರಮಾಡಿಕೊಂಡು ತಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ, ದಿಃ28.05.2019 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ, ಈ ಅಪಘಾತಕ್ಕೆ ಆರೋಪಿಯ ಅತೀ ವೇಗ ಮತ್ತು ನಿರ್ಲಕ್ಷತೆಯ ಚಾಲನೆ ಕಾರಣವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ-

ಪ್ರಶ್ನೆಃ- ಫ್ರಾಸಾ-3 ಸತ್ತಾರ್ ಗೃಹ ರಕ್ಷಕ ಚಿತ್ರದುರ್ಗ ಇವರು ತನ್ನ ಸಾಕ್ಷ್ಯದಲ್ಲಿ ದಿಃ24.05.2019 ರಂದು ತಾನು ಮೃತ ಸುರೇಶ್ ಹಾಗೂ ಚಾಸಾ-1 ಮತ್ತು 3 ರವರೊಂದಿಗೆ ಗುಯಿಲಾಳು ಟೋಲ್ ಬಳಿ, ವಾಹನ ತಪಾಸಣೆ ಮಾಡುತ್ತಿದ್ದಾಗ, ದಿಃ25.05.2019 ರಂದು ಬೆಳಗಿನ ಜಾವ 12.15 ರ ಸಮಯದಲ್ಲಿ ತಾವುಗಳು ತಮ್ಮ ಜೀಪ್ ಸಂ.KA 16-G-3636 ಬಳಿ ಇದ್ದಾಗ ಒಂದು ಲಾರಿ ಚಿತ್ರದುರ್ಗದ ಕಡೆಯಿಂದ ಹಿರಿಯೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಜೀಪ್ ಬಳಿ ನಿಂತಿದ್ದ ಸುರೇಶ್ ಅವರಿಗೆ ಡಿಕ್ಕಿ ಪಡಿಸಿ ಲಾರಿಯನ್ನು ನಿಲ್ಲಿಸದೆ ಹೋಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ-

ಪ್ರಶ್ನೆಃ- ಫ್ರಾಸಾ-3 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಸದರಿ ಲಾರಿಯ ಸಂಖ್ಯೆ: MH 14 GU 8052 ಆಗಿರುತ್ತದೆ, ಅಪಘಾತದಿಂದಾಗಿ ತಮ್ಮ ಡ್ರೈವರ್ ಸುರೇಶ್ ಅವರ ತಲೆಗೆ ಮತ್ತು ಬಲ ಭುಜಕ್ಕೆ ತೀವ್ರವಾಗಿ ಪೆಟ್ಟು ಬಿದ್ದು ಗಾಯಗಳಾಗಿರುತ್ತವೆ, ಅವರನ್ನು ನಮ್ಮ ಇಲಾಖಾ ವಾಹನದಲ್ಲಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ, ಪೋಲಿಸರು ಬೆಳಗಿನ ಜಾವ 3.00 ಸಮಯದಲ್ಲಿ ಸುರೇಶ್ ಮೃತಪಟ್ಟರು ಎಂದು ತಿಳಿಸಿರುತ್ತಾರೆ, ಅದೇ ದಿನ ಬೆ.6.00 ಗಂಟೆಗೆ ಐಮಂಗಲ

ಪೊಲೀಸ್ ಠಾಣೆಯಲ್ಲಿ ಚಾಸಾ-1 ರವರು ದೂರು ದಾಖಲಿಸಿರುತ್ತಾರೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ-

ಪ್ರಶ್ನೆ:- ಫ್ರಾಸಾ-3 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಈ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ, ಈ ಅಪಘಾತಕ್ಕೆ ಆರೋಪಿಯ ಅತೀ ವೇಗ ಮತ್ತು ನಿರ್ಲಕ್ಷತೆಯ ಚಾಲನೆ ಕಾರಣವಾಗಿರುತ್ತದೆ, ಲಾರಿ ಚಾಲಕನ ತಪ್ಪಿನಿಂದ ಈ ಅಪಘಾತ ಸಂಭಂವಿಸಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ-

ಪ್ರಶ್ನೆ:- ಫ್ರಾಸಾ-7 ಈರೇಶ್.ಟಿ ಮುಖ್ಯ ಪೇದೆ, ಇವರು ತನ್ನ ಸಾಕ್ಷ್ಯದಲ್ಲಿ ಚಾಸಾ-17 ರವರ ಮೌಖಿಕ ಆದೇಶದ ಮೇರೆಗೆ ಅಪಘಾತ ಪಡಿಸಿದ MH-14-GU-8052 ವಾಹನವನ್ನು ಪತ್ತೆ ಮಾಡಲು ತಿಳಿಸಿದ ಮೇರೆಗೆ ತಾನು ಪತ್ತೆ ಕಾರ್ಯ ಶುರು ಮಾಡಿ, ಹಿರಿಯೂರು-ಬೆಂಗಳೂರು ಬೈಪಾಸ್ ರಸ್ತೆಯಲ್ಲಿ ಸದರಿ ವಾಹನವನ್ನು ಚಾಲಕನ ಸಮೇತ ವಶಕ್ಕೆ ಪಡೆದು ಐಮಂಗಲ ಠಾಣೆಗೆ ತಂದು ಚಾಸಾ-17 ರ ಮುಂದೆ ಹಾಜರು ಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ-

ಪ್ರಶ್ನೆ:- ಫ್ರಾಸಾ-7 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಸದರಿ ವಾಹನವನ್ನು ಚಾಸಾ-17 ರವರು ಪಂಚನಾಮೆ ಮೂಲಕ ಚಾಸಾ-6 ಮತ್ತು 7 ರವರ ಸಮಕ್ಷಮ ಬೆ.9.00 ರಿಂದ 9.45 ರವರೆಗೆ ಪಂಚನಾಮೆ ಜರುಗಿಸಿ ಸದರಿ ವಾಹನವನ್ನು ಅಮಾನತ್ತು ಪಡಿಸಿಕೊಂಡರು, ಈ ಕುರಿತು ಚಾಸಾ-17 ರವರ

ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ– ಫ್ರಾಸಾ–8 ಚನ್ನೇಗೌಡ. ಆರ್.ಜಿ. ಆರಕ್ಷಕ ನಿರೀಕ್ಷಕರು, ಇವರು ತನ್ನ ಸಾಕ್ಷ್ಯದಲ್ಲಿ ದಿನಾಂಕಃ28.05.2019 ರಂದು ಚಾಸಾ–17 ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ಅದೇ ದಿನ ಮೋಟಾರ್ ಸೈಕಲ್ ಸಂಖ್ಯೆಃ MH–14–GU–8042–ಈಚರ್ ಲಾರಿ ಐ ಎಂ ವಿ ತಪಾಸಣೆಗೆ ಮನವಿ ಸಲ್ಲಿಸಿರುತ್ತೇನೆ, ಅದೇ ದಿನ ಸದರಿ ವಾಹನದ ಆ್ರ್ ಸಿ ಮಾಲೀಕರಾದ ಚಾಸಾ–11 ರವರಿಗೆ ನೋಟೀಸ್ ನೀಡಿ ಅದಕ್ಕೆ ಉತ್ತರವನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ– ಫ್ರಾಸಾ–8 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಉತ್ತರದಲ್ಲಿ ಅಪಘಾತ ನಡೆದ ದಿನ ಲಾರಿಯನ್ನು ಆರೋಪಿ ಸಂತೋಷ್ ತಂಡಲೇ ಚಾಲನೆ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ, ಅದೇ ದಿನ ಚಾಸಾ–11 ರವರಿಂದ ನಷ್ಟಭರ್ತಿ ಬಾಂಡ್ ನ್ನು ಪಡೆದು ಸದರಿ ವಾಹನವನ್ನು ಚಾಸಾ–11 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ– ಫ್ರಾಸಾ–8 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಈ ಪ್ರಕರಣದ ಆರೋಪಿ ಠಾಣೆಗೆ ಬಂದು ಹಾಜರಾಗಿ ತನ್ನ ತಪ್ಪು ಒಪ್ಪಿಕೊಂಡಿದ್ದರಿಂದ ಅವರ ವಿರುದ್ಧ ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿ ಜಾಮೀನಿನ ಮೇಲೆ

ಬಿಡುಗಡೆ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ– ಫ್ರಾಸಾ–8 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ–1 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ಹಾಗೂ ಚಾಸಾ–2 ಮತ್ತು 3 ರವರ ಹೇಳಿಕೆಯನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ– ಫ್ರಾಸಾ–8 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ದಿಃ15.10.2019 ರಂದು ಚಾಸಾ–14 ರವರಿಂದ ಐ ಎಂ ವಿ ವರದಿಯನ್ನು ಪಡೆದಿರುತ್ತೇನೆ, ದಿಃ22.10.2019 ರಂದು ದಾವಣಗೆರೆ ಎಸ್ ಎಸ್ ಆಸ್ಪತ್ರೆಯಿಂದ ಚಾಸಾ–12 ರವರಿಂದ ಮೃತ ಸುರೇಶ್ ಅವರ ಶವ ತನಿಖಾ ವರದಿಯನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆಃ– ಫ್ರಾಸಾ–8 ಇವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ದಿಃ24.01.2020 ರಂದು ಚಾಸಾ–14 ರವರಿಂದ ಕರ್ತವ್ಯ ಧೃಢೀಕರಣ ಪತ್ರವನ್ನು ಪಡೆದಿರುತ್ತೇನೆ, ಪ್ರಕರಣದಲ್ಲಿ ಆರೋಪಿತನ ವಿರುದ್ಧ ದೋಷಾರೋಪ ಸಿದ್ಧವಾಗಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ಆರೋಪಿತನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರಃ–

ಪ್ರಶ್ನೆ:– ಫ್ರಾಸಾ–9 ದಯಾನಂದ ಇವರು ತನ್ನ ಸಾಕ್ಷ್ಯದಲ್ಲಿ ತಾನು ಸಂಖ್ಯೆ ಎಂ.ಹೆಚ್.14–ಜಿಯು–8052 ನೇದ್ದರ ನೋಂದಣಿ ಮಾಲೀಕನಾಗಿರುತ್ತೇನೆ, ಈಗ ಸುಮಾರು 4–5 ವರ್ಷಗಳ ಹಿಂದೆ ಅಪಘಾತ ಪ್ರಕರಣದಲ್ಲಿ ಪೊಲೀಸರು ತನ್ನ ವಾಹನವನ್ನು ವಶಪಡಿಸಿಕೊಂಡಿದ್ದರು, ತಾನು ಇಂಡೆಮ್ನಿಟಿ ಬಾಂಡ್ ಬರೆದುಕೊಟ್ಟು ತನ್ನ ವಾಹನವನ್ನು ಬಿಡಿಸಿಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರ:–

ಪ್ರಶ್ನೆ:– ಫ್ರಾಸಾ–10 ಜಿ.ಎಸ್. ಹೆಗಡೆ ನಿವೃತ್ತ ಫ್ರಾದೇಶಿಕ ಸಾರಿಗೆ ಅಧಿಕಾರಿ ಇವರು ತನ್ನ ಸಾಕ್ಷ್ಯದಲ್ಲಿ ಪೊಲೀಸ್ ವೃತ್ತ ನಿರೀಕ್ಷಕರು, ಹಿರಿಯೂರು ವೃತ್ತ ಇವರ ಮನವಿಯ ಮೇರೆಗೆ ದಿನಾಂಕ.20.05.2019 ರಿಂದ ದಿನಾಂಕ.26.05.2019 ರವೆರೆಗ ಚಾಸಾ–1 ಮತ್ತು ಮೃತ ಎಲ್.ಸುರೇಶ್ ರವರ ಕರ್ತವ್ಯ ದೃಢೀಕರಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿ ಉತ್ತರ:–

ಪ್ರಶ್ನೆ: – ನೀವು ಏನಾದರೂ ಹೇಳುವುದಿದೆಯಾ ?

ಆರೋಪಿ ಉತ್ತರ:–

ಪ್ರಶ್ನೆ: – ನಿಮ್ಮ ಪರವಾಗಿ ವಿಚಾರಣೆ ಮಾಡುತ್ತೀರಾ? ಯಾವುದಾದರೂ ಸಾಕ್ಷ್ಯ ಗಳಿವೆಯೇ ?

ಆರೋಪಿ ಉತ್ತರ:–

ಪ್ರಶ್ನೆಃ – ನಿಮ್ಮ ಪರವಾಗಿ ಯಾವುದಾದರೂ ದಾಖಲಾತಿಗಳನ್ನು ಸಲ್ಲಿಸುತ್ತೀರಾ ?

**ಆರೋಪಿ ಉತ್ತರಃ–**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟಿರುವ ಉತ್ತರವನ್ನು ಯತಾವತ್ತಾಗಿ ದಾಖಲಿಸಲಾಗಿದೆ )

ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್. ಸಿ. ಹಿರಿಯೂರು.